ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಚಿತ್ರದುರ್ಗ
ಹಳೇ ಕೆ.ಎಸ್.ಆರ್.ಟಿ.ಸಿ ಡಿಪೋ ರಸ್ತೆ, ಹೆಚ್.ಎಂ.ಟಿ ಕಾಂಪೌಂಡ್, ಚರ್ಚ್ ಎಕ್ಸ್‌ಟೆಂಕ್ಷನ್, ಚಿತ್ರದುರ್ಗ-577501
ದೂರವಾಣಿ ಸಂ: 08194-234113 ಇಮೇಲ್ ವಿಳಾಸ: daochitradurga2021@gmail.com

NAM 19/9/25

ಸಂಖ್ಯೆ: ಜಿಆಕಚೆ/27/ಸಿಬ್ಬಂದಿ(3)/2022-23 ದಿನಾಂಕ: 16-09-2025

# ಮರು ನೇಮಕಾತಿ ಅಧಿಸೂಚನೆ

**ವಿಷಯ:** ಕೇಂದ್ರ ಪುರಸ್ಕೃತ ಯೋಜನೆಯ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ತಾಲ್ಲೂಕು ಮೇಲ್ದರ್ಜೆಗೇರಿಸಲಾದ ತಾಲ್ಲೂಕು ಸರ್ಕಾರಿ ಆಯುರ್ವೇದ ಘಟಕ, ಹೊಸದುರ್ಗ ಇಲ್ಲಿ ಖಾಲಿ ಇರುವ ಸ್ತ್ರೀ-ರೋಗ ಅಟೆಂಡರ್ ಹುದ್ದೆಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಕುರಿತು.

**ಉಲ್ಲೇಖ:**
1) ಆಯುಷ್ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಆಯುಷ್/07/ಐಇಸಿ(3)/2015-16, ದಿನಾಂಕ: 21-08-2019 & 27-06-2019.
2) ಆಯುಷ್ ನಿರ್ದೇಶನಾಲಯದ ಪತ್ರ ಸಂಖ್ಯೆ: ಆಯುಷ್/69/NAM/2021-22, ದಿನಾಂಕ: 17-01-2023 & 28-08-2019.
3) ಆಯುಷ್ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: AYUSH/56/NAM/2025-NAM-DIRECTORATE OF AYUSH ದಿನಾಂಕ: 05-02-2025.
4) ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್ ಎಲ್ ಪಿ 2024 ಬೆಂಗಳೂರು, ದಿನಾಂಕ: 25-08-2025.
5) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2025 ಬೆಂಗಳೂರು, ದಿನಾಂಕ: 03-09-2025.
6) ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 266 ಸೆನೆನಿ 2025 ಬೆಂಗಳೂರು, ದಿನಾಂಕ: 10-09-2025.
7) ಮಾನ್ಯ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ರವರ ಕಡತದ ಅನುಮೋದನೆ ದಿ: 02-09-2025.

19/9/25

*****-******

ಕೇಂದ್ರ ಪುರಸ್ಕೃತ ಯೋಜನೆಯ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಮೇಲ್ದರ್ಜೆಗೇರಿಸಲಾದ ತಾಲ್ಲೂಕು ಸರ್ಕಾರಿ ಆಯುರ್ವೇದ ಘಟಕ, ಹೊಸದುರ್ಗ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ., ಇಲ್ಲಿ ಖಾಲಿ ಇರುವ ಸ್ತ್ರೀ-ರೋಗ ಅಟೆಂಡರ್ ಹುದ್ದೆಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಉಲ್ಲೇಖ(1) ಮಾರ್ಗಸೂಚಿಗಳನ್ವಯ ನಿಯಮಾನುಸಾರ ಪಾರದರ್ಶಕವಾಗಿ ಗುತ್ತಿಗೆ ಷರತ್ತುಗಳನ್ವಯ ಉಲ್ಲೇಖಿತ ಉಲ್ಲೇಖ(2) ಮತ್ತು (3)ರ ಆದೇಶದನ್ವಯ ಉಲ್ಲೇಖ (4)ರ ಪರಿಷ್ಕೃತ ರೋಸ್ಟರ್ ಮೀಸಲಾತಿ ಆದೇಶದನ್ವಯ ಉಲ್ಲೇಖ(5)ರ ಆದೇಶಾನುಸಾರ ಒಳ ಮೀಸಲಾತಿಯನ್ನು ನಿಗದಿ ಪಡಿಸಿಕೊಂಡು ಮತ್ತು ಮೆರಿಟ್ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಉಲ್ಲೇಖ(6)ರ ಅನುಮತಿ ಮೇರೆಗೆ ಈ ಕೆಳಕಂಡ ಹುದ್ದೆಯನ್ನು ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಯಿಂದ ಅರ್ಜಿಯನ್ನು ಕರೆಯಲಾಗಿದೆ.

| ಕ್ರ. ಸಂ | ಹುದ್ದೆ ಖಾಲಿ ಇರುವ ಸ್ಥಳ | ಪದನಾಮ | ಹುದ್ದೆಗಳ ಸಂಖ್ಯೆ | ನಿಗದಿ ಪಡಿಸಲಾದ ಮೀಸಲಾತಿ | ಕನಿಷ್ಟ ವಿದ್ಯಾರ್ಹತೆ | ಮಾಸಿಕ ಸಂಚಿತ ವೇತನ (ರೂ) | ವಯೋಮಿತಿ | ವಯೋಮಿತಿ ಸಡಿಲಿಕೆ |
|---|---|---|---|---|---|---|---|---|
| 1 | ತಾಲ್ಲೂಕು ಸರ್ಕಾರಿ ಆಯುರ್ವೇದ ಘಟಕ ಹೊಸದುರ್ಗ | ಸ್ತ್ರೀ-ರೋಗ ಅಟೆಂಡರ್ | 01 | ಪ.ಜಾ. ಪ್ರವರ್ಗ-ಎ ನಲ್ಲಿ ಬರುವಂತಹ ಸಮುದಾಯದವರು (CAST CODE: 22,28,32,40,42,48, 50,51,56,61,72,76, 88,89,93,94) | ಕನಿಷ್ಟ 10ನೇ ತರಗತಿ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಸರ್ಕಾರಿ/ಖಾಸಗಿ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕಡ್ಡಾಯವಾಗಿ ಸ್ತ್ರೀರೋಗ ಅಟೆಂಡರ್ ಆಗಿ ಕನಿಷ್ಟ 02 ವರ್ಷಗಳು ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. | 18,500 | ಕನಿಷ್ಠ-18 ಗರಿಷ್ಠ-40 ವರ್ಷಗಳು | ಅಂಗವಿಕಲ/ ವಿಧವೆ ಅಭ್ಯರ್ಥಿಗಳಿಗೆ 10 ವರ್ಷಗಳು |

ಮೇಲ್ಕಂಡ ಹುದ್ದೆಗೆ ಅರ್ಜಿಯನ್ನು ಈ ಕಛೇರಿಯಿಂದ ಉಚಿತವಾಗಿ ನೀಡಲಾಗುವುದು. ಮತ್ತು ಅಭ್ಯರ್ಥಿಯು ಈ ಅಧಿಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ ಅರ್ಜಿಯನ್ನು ಈ ಕಛೇರಿಯಿಂದ ಪಡೆದು ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ **ದಿನಾಂಕ: 30-09-2025 ರಂದು ಸಂಜೆ: 5.30 ರೊಳಗೆ** ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಹಳೇ ಕೆ.ಎಸ್.ಆರ್.ಟಿ.ಸಿ ಡಿಪೋ ರಸ್ತೆ, ಹೆಚ್.ಎಂ.ಟಿ ಕಾಂಪೌಂಡ್, ಚರ್ಚ್ ಎಕ್ಸ್‌ಟೆಂಕ್ಷನ್, ಚಿತ್ರದುರ್ಗ., ಈ ವಿಳಾಸಕ್ಕೆ SPEED POST ಮುಖಾಂತರ ಸಲ್ಲಿಸುವುದು.

22/9/2028

**ಜಿಲ್ಲಾ ಆಯುಷ್ ಅಧಿಕಾರಿಗಳು**
ಜಿಲ್ಲಾ ಆಯುಷ್ ಕಛೇರಿ ಹಾಗೂ ಜಿಲ್ಲಾ ಆಯುಷ್
ನೇಮಕಾತಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳು
ಚಿತ್ರದುರ್ಗ.

**ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಮತ್ತು ಕಛೇರಿ ಪ್ರಕಟಣಾ ಫಲಕಕ್ಕೆ ಸಲ್ಲಿಸಲಾಗಿದೆ.**

1) ಮಾನ್ಯ ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು ರವರಿಗೆ.
2) ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ರವರಿಗೆ.
3) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿತ್ರದುರ್ಗ ರವರಿಗೆ.
4) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿತ್ರದುರ್ಗ.
5) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಚಿತ್ರದುರ್ಗ.
6) ಉಪ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಚಿತ್ರದುರ್ಗ
7) ಕಛೇರಿಯ ಪ್ರಕಟಣಾ ಫಲಕಕ್ಕೆ.
8) ಕಛೇರಿ ಪ್ರತಿ.

**ನೇಮಕಾತಿ ಷರತ್ತುಗಳು**

1) ಈ ಗುತ್ತಿಗೆ ನೇಮಕಾತಿಯು ಕೇಂದ್ರ ಪುರಸ್ಕೃತ ಯೋಜನೆಗೆ ಮಾತ್ರ ಅನ್ವಯವಾಗಿರುತ್ತದೆ.
2) ಈ ಗುತ್ತಿಗೆ ಹುದ್ದೆಯು ಸಂಪೂರ್ಣ ತಾತ್ಕಾಲಿಕ ಹುದ್ದೆಯಾಗಿದ್ದು, ನೇಮಕಾತಿಗೊಂಡ ದಿನಾಂಕದಿಂದ ಒಂದು ವರ್ಷಕ್ಕೆ ಅಥವಾ ಮುಂದಿನ ಆದೇಶ ಯಾವುದು ಮೊದಲು ಅಲ್ಲಿಗೆ ಕೊನೆಗೊಳ್ಳುತ್ತದೆ.
3) ಯಾವುದೇ ಸಂದರ್ಭದಲ್ಲಿಯೂ ಸದರಿ ಹುದ್ದೆಯನ್ನು ಖಾಯಂ ಎಂದು ಪರಿಗಣಿಸಲಾಗುವುದಿಲ್ಲ.
4) ಗುತ್ತಿಗೆ ನೌಕರರಿಗೆ ಸಿಗುವಂತಹ ರಜಾ ಸೌಲಭ್ಯಕ್ಕೆ ಅರ್ಹನಾಗಿರುತ್ತಾರೆ.
5) ಈ ಸೇವೆಯು ತಾತ್ಕಾಲಿಕವಾಗಿದ್ದು, ಯಾವುದೇ ಸಂದರ್ಭದಲ್ಲಾದರೂ ಈ ನೇಮಕಾತಿಯನ್ನು ಮುಂದುವರೆಸುವ ಅಥವಾ ರದ್ದುಪಡಿಸುವ ಹಕ್ಕನ್ನು ಜಿಲ್ಲಾ ಆಯುಷ್ ಅಧಿಕಾರಿಗಳು ಹೊಂದಿರುತ್ತಾರೆ.
6) ಈ ನೇಮಕಾತಿ ಅಧಿಸೂಚನೆಯಲ್ಲಿ ನೀಡಿದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುವುದು.
7) ಜಿಲ್ಲಾ ಆಯುಷ್ ಅಧಿಕಾರಿಗಳು ಮತ್ತು ನೇಮಕಗೊಂಡ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ವಹಿಸುವ ಸಂಬಂಧಪಟ್ಟ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸತಕ್ಕದ್ದು. ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗುವುದು ಅಥವಾ ವೈದ್ಯಾಧಿಕಾರಿಗಳಿಂದ ಹಾಗೂ ಸಾರ್ವಜನಿಕರಿಂದ ಅಸಮರ್ಪಕ ಕರ್ತವ್ಯ ನಿರ್ವಹಣೆ ಬಗ್ಗೆ ಏನಾದರೂ ದೂರುಗಳು ಬಂದಲ್ಲಿ ಗುತ್ತಿಗೆ ಹುದ್ದೆಯಿಂದ ವಜಾ ಮಾಡಲಾಗುವುದು.
8) ಗುತ್ತಿಗೆ ಸಿಬ್ಬಂದಿಯ ಕರ್ತವ್ಯ ನಿರ್ವಹಣೆ ಕುರಿತು ಪ್ರತಿ ವರ್ಷದ ಅಂತ್ಯದಲ್ಲಿ ಸಂಬಂಧಿಸಿದ ಆಸ್ಪತ್ರೆಗಳ ಆಡಳಿತ ವೈದ್ಯಾಧಿಕಾರಿಗಳಿಂದ Performance Appraisal ಪಡೆದು ಕರ್ತವ್ಯ ನಿರ್ವಹಣೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಮುಂದಿನ ವರ್ಷಕ್ಕೆ ಮುಂದುವರೆಸಲಾಗುವುದು. ಇಲ್ಲದಿದ್ದಲ್ಲಿ ಜಿಲ್ಲಾ ಆಯುಷ್ ನೇಮಕಾತಿ ಸಮಿತಿಯ ಅನುಮೋದನೆ ಪಡೆದು ವಜಾಗೊಳಿಸಲಾಗುವುದು.
9) ಗುತ್ತಿಗೆ ಸಿಬ್ಬಂದಿಯು ಕೇಂದ್ರ ಸ್ಥಾನದಲ್ಲಿ ತಂಗಿದ್ದು 24 ಗಂಟೆಗಳಲ್ಲೂ ಯಾವುದೇ ತುರ್ತು ಸೇವೆಗೆ ಲಭ್ಯವಿದ್ದು, ಸೇವೆ ಸಲ್ಲಿಸುವ ಷರತ್ತಿಗೆ ಒಳಪಟ್ಟಿರತಕ್ಕದ್ದು.
10) ತೃಪ್ತಿಕರವಾದ ಕರ್ತವ್ಯ ನಿರ್ವಹಣೆ ಷರತ್ತಿಗೆ ಒಳಪಟ್ಟು ಪ್ರತಿ ತಿಂಗಳು ಕಾಲಕಾಲಕ್ಕೆ ಮಾನ್ಯ ಆಯುಕ್ತರು, ಆಯುಷ್ ಇಲಾಖೆ, ಬೆಂಗಳೂರು ರವರು ನಿಗದಿಪಡಿಸಿದ ಸಂಚಿತ ಮೊತ್ತವನ್ನು ಮಾತ್ರ ನೀಡಲಾಗುವುದು. ಯಾವುದೇ ಹೆಚ್ಚುವರಿಯಾಗಿ ವೇತನ ಮತ್ತು ಭತ್ಯೆಗೆ ಅರ್ಹರಿರುವುದಿಲ್ಲ.
11) ಈ ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯನ್ನು ಯಾವುದೇ ಸಮಯದಲ್ಲಿ ಕಾರಣವಿಲ್ಲದೇ ಸರ್ಕಾರ ಅಥವಾ ಉಭಯ ಪಕ್ಷಗಳು ಒಂದು ತಿಂಗಳ ನೋಟೀಸು ಕೊಟ್ಟು ಸೇವೆಯನ್ನು ಕೈ ಬಿಡುವ ಷರತ್ತಿಗೊಳಪಟ್ಟಿರುತ್ತದೆ.
12) ದುರ್ನಡತೆಯಿಂದಾಗಿ ಸರ್ಕಾರಕ್ಕೆ ನಷ್ಟ ಉಂಟಾದಲ್ಲಿ ಗುತ್ತಿಗೆ ಸಿಬ್ಬಂದಿಯು ಅದನ್ನು ಸರ್ಕಾರಕ್ಕೆ ತುಂಬಿ ಕೊಡತಕ್ಕದ್ದು.
13) ಗುತ್ತಿಗೆ ಸಿಬ್ಬಂದಿಯು ಖಾಯಂ ನೇಮಕಾತಿಗಾಗಲೀ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತಿ ಉಪದಾನಕ್ಕಾಗಲೀ, ವೇತನ ಶ್ರೇಣಿಗಾಗಲೀ ಅಥವಾ ಯಾವುದೇ ಭತ್ಯೆಗಳನ್ನು ಹಾಗೂ ಸಂಭಾವನೆಗಳನ್ನು ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ ಅಥವಾ ಈ ಕುರಿತು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ / ದಾವೆ ಹೂಡುವಂತಿಲ್ಲ.
14) ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯು ನಿರ್ದಿಷ್ಟ ಆಸ್ಪತ್ರೆಗೆ ಆಗಿರುವುದರಿಂದ ಯಾವುದೇ ಬೇರೆ ಆಸ್ಪತ್ರೆಗಾಗಲಿ / ಚಿಕಿತ್ಸಾಲಯಕ್ಕಾಗಲಿ ಅಥವಾ ಜಾಗಕ್ಕಾಗಲಿ ವರ್ಗಾವಣೆ ಅಥವಾ ಪ್ರತಿ ನಿಯೋಜನೆ ಪಡೆಯಲು ಅವಕಾಶವಿರುವುದಿಲ್ಲ.
15) ನೇಮಕಾತಿ ಹೊಂದಿದ ಮಾತ್ರಕ್ಕೆ ಗುತ್ತಿಗೆ ಹುದ್ದೆಯ ಮೇಲೆ ಸಂಪೂರ್ಣ ಹಕ್ಕು ಹೊಂದಿರುವುದಿಲ್ಲ.
16) ಕಾಲಕಾಲಕ್ಕೆ ಸರ್ಕಾರದಿಂದ ಹಾಗೂ ಆಯುಷ್ ಇಲಾಖೆಯಿಂದ ಹೊರಡಿಸಲಾಗುವ ಗುತ್ತಿಗೆ ನೌಕರರಿಗೆ ಸಂಬಂಧಿಸಿದ ಸುತ್ತೋಲೆಗಳ ಮತ್ತು ಆದೇಶಗಳ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.
17) ನೇಮಕಾತಿ ಹೊಂದಿದ ಸಿಬ್ಬಂದಿಗೆ ಇಲಾಖೆಯಿಂದ, ಬಿಡುಗಡೆಯಾಗುವ ಅನುದಾನದ ಲಭ್ಯತೆ ಮೇರೆಗೆ ಪ್ರತಿ ತಿಂಗಳು ವೇತನ ಪಾವತಿಸಲಾಗುವುದು.
18) ಜಾತಿ ಮತ್ತು ಆದಾಯ ಆಧರಿತ ಮೀಸಲಾತಿ ಕೋರುವ ಅಭ್ಯರ್ಥಿಯು, ಸಂಬಂಧಿಸಿದ ಪ್ರಾಧಿಕಾರ/ಅಧಿಕಾರಿಯವರಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು.
19) ವಯೋಮಿತಿ ಸಡಿಲಿಕೆಗೆ ಸಂಬಂಧಿಸಿದಂತೆ, ವಿನಾಯಿತಿ ಕೋರುವ ಅಭ್ಯರ್ತಿಯು, ಸಂಬಂಧಿಸಿದ ಪ್ರಾಧಿಕಾರ/ಅಧಿಕಾರಿಯವರಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು.
20) ಈ ನೇಮಕಾತಿ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಜಿಲ್ಲಾ ಆಯುಷ್ ನೇಮಕಾತಿ ಸಮಿತಿಯು ಹೊಂದಿರುತ್ತದೆ.

**ಜಿಲ್ಲಾ ಆಯುಷ್ ಅಧಿಕಾರಿಗಳು**
ಜಿಲ್ಲಾ ಆಯುಷ್ ಕಛೇರಿ ಹಾಗೂ ಜಿಲ್ಲಾ ಆಯುಷ್
ನೇಮಕಾತಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳು
ಚಿತ್ರದುರ್ಗ.